**ಸಿಸಿ ನಂ. 1444/2024**

**ಸಿ.ಡಬ್ಲೂ–6 ಪಿ.ಡ್ಲೂ:5**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.**

| | | |
|---|---|---|
| ಸಾಕ್ಷಿದಾರನ ಹೆಸರು | : | ಶಾಂತಾಬಾಯಿ ಡೋರನಹಳ್ಳಿ |
| ಗಂಡನ ಹೆಸರು | : | ವಿಠ್ಠಲ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಮನೆ ಕೆಲಸ. |
| ವಾಸ ಸ್ಥಳ | : | ಸಿಂದಗಿ |

ದಿನಾಂಕ 01–09–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭಿಯೋಜಕ ರವರಿಂದ.**

1. ಚಾ.ಸಾ. 1 ಮತ್ತು 5 ರವರು ನನ್ನ ಮಕ್ಕಳು. ಚಾ.ಸಾ. 7 ರಿಂದ 13 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಮೃತ ವಿಠ್ಠಲ ನನ್ನ ಗಂಡ. ಅವರು ಅಪಘಾತದಲ್ಲಿ ಮರಣ ಹೊಂದಿದ್ದಾರೆ. 2024 ರಲ್ಲಿ ಒಂದು ದಿನ ನನ್ನ ತಂದೆಯವರು ಟಂ ಟಂ ನಲ್ಲಿ ಕುಳಿತುಕೊಂಡು ಹೊಗುತ್ತಿದ್ದಾಗ, ಯಂಕಂಚಿ ಹಳ್ಳದ ಸಮೀಪ್ ಅಪಘಾತವಾಗಿರುತ್ತದೆ. ಟಂ ಟಂ ಗೆ ಕುರಿ ಅಡ್ಡ ಬಂದಿದ್ದರಿಂದ ಟಂ ಟಂ ಪಲ್ಟಿಯಾಗಿರುತ್ತದೆ. ಆಗ ನಾನು ಮನೆಯಲ್ಲಿದ್ದೆ.

2. ನನ್ನ ತಂದೆಯವರನ್ನು ವಿಜಯಪುರದ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಅವರ ತಲೆಗೆ ಗಾಯಗಳಾಗಿದ್ದವು. ಅವರು ಮರಣ ಹೊಂದಿರುತ್ತಾರೆ. ಟಂ ಟಂ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಈ ಅಪಘಾತದಲ್ಲಿ ಬೇರೆ ಯಾರಿಗೆ ಏನು ಆಗಿದೆ ಎಂದು

ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ಹೇಳಿಕೆಯನ್ನು ನುಡಿದಿಲ್ಲ.

**(ಈ ಹಂತದಲ್ಲಿ ಸರಕಾರಿ ಸಹಾಯಕರು ಅಭೀಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸರಕಾರಿ ಸಹಾಯಕ ಅಭೀಯೋಜಕ ರವರಿಂದ.**

3. ದಿ.13–08–2023 ರಂದು ಮದ್ಯಾಹ್ನ 3–00 ಗಂಟೆ ಸುಮಾರಿಗೆ ಈ ದಿನ ನ್ಯಾಯಾಲಯಮುಂದೆ ಆರೋಪಿಯ ತನ್ನ ಟಂಟಂ ವಾಹನ ನಂ. ಕೆಎ 28/ಡಿ–7521 ನ್ನು ವಿಠ್ಠಲ ರವರನ್ನು ಕುಡಿಸಿಕೊಂಡು ತನ್ನ ಟಂಟಂ ನ್ನು ಅತೀ ಜೊರಾಗಿ ಮತ್ತು ನಿರ್ಲಕ್ಷತನದಿಂದ ಸಿಂದಗಿ ಕಡೆಯಿಂದ ಖೈನೂರ ಕಡೆಗೆ ಚಾಲನೆ ಮಾಡಿಕೊಂಡು ಹೊಗುತಿದ್ದಾಗ ಯಂಕಂಚಿ ಹಳ್ಳದ ಸಮೀಪ್ ರಸ್ತೆಯ ಬದಿ ಯಲ್ಲಿ ಪಲ್ಟಿ ಮಾಡಿ ಆತನ ತಲೆಗೆ ಮತ್ತು ಬೆನ್ನಿಗೆ ಭಾರಿ ಗಾಯಗಳು ಆಗುವಂತೆ ಮಾಡಿ ಟಂ ಟಂನದಲ್ಲಿದ್ದ ಚಾಸಾ 13 ರವರಿಗೂ ಸಹ ಮೈ ಕೈ ಮತ್ತು ತಲೆಗೆ ಗಾಯಗಳು ಆಗುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ಆರೋಪಿಯು ತನ್ನ ವಾಹನವನ್ನು ಜೋರಾಗಿಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿದ್ದರಿಂದ ಅಪಘಾತ ಸಂಬವಿಸಿದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯವನ್ನು ತಿಳಿದುಕೊಂಡು ಪೊಲೀಸರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿ.ಪಿ. 12 ಎಂದು

ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.
ಸಿಂದಗಿ